KAHS200000032021

**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,</u>**

**<u>ಆಲೂರು</u>**

**<u>ದಿನಾಂಕಃ 04ನೇ ಜೂನ್ 2026</u>**

**ಉಪಸ್ಥಿತರುಃ- ಶ್ರೀಮತಿ ಸ್ನೇಹಾ ಎಂ.**
**ಬಿ.ಎ.,ಎಲ್‌ಎಲ್.ಬಿ.,**
**ಸಿವಿಲ್ ನ್ಯಾಯಾಧೀಶರು,**
**ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಆಲೂರು.**

**<u>ಸಿ.ಸಿ.ನಂ.2/2021</u>**

ಫಿರ್ಯಾದುದಾರರುಃ ಸರ್ಕಾರದ ವತಿಯಿಂದ
ಆಲೂರು ಪೊಲೀಸ್ ಠಾಣೆ, ಆಲೂರು.

- ವಿರುದ್ಧ-

ಆರೋಪಿಃ **ಶ್ರೀ.ಶೇಖರ**
ಬಿನ್ ತಿಮ್ಮೇಗೌಡ
ಸುಮಾರು 36 ವರ್ಷ,
ವಾಸಃ ದ್ಯಾವಪ್ಪನ ಕೊಪ್ಪಲು,
ಎಂ.ಸಿ ಕಾಲೇಜು, ಸಾಲಗಾಮೆ ರಸ್ತೆ,
ಹಾಸನ.

| | |
|---|---|
| 1. ಕೃತ್ಯ ಎಸಗಿದ ದಿನಾಂಕ | 17.08.2020 |
| 2. ಅಪರಾಧ ವರದಿ ಮಾಡಿದ ದಿನಾಂಕ | 19.08.2020 |
| 3.ಫಿರ್ಯಾದುದಾರ/ಬಾತ್ಮಿದಾರರ ಹೆಸರು | ಗಂಗಾಧರ.ಹೆಚ್.ಎಂ |
| 4. ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | 15.12.2022 |
| 5. ಸಾಕ್ಷಿದಾರರ ವಿಚಾರಣೆ ಕೊನೆಗೊಂಡ ದಿನಾಂಕ | 04.09.2025 |
| 6. ದೂಷಿಸಲಾದ ಆರೋಪಗಳು | ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಸಹವಾಚಕ 187 ಐ.ಎಂ.ವಿ ಕಾಯ್ದೆ |

| | |
|---|---|
| **7.** ನ್ಯಾಯಾಧೀಶರ ಅಭಿಪ್ರಾಯ | ಅಂತಿಮ ಆದೇಶದಂತೆ |
| **8.** ಪಿರ್ಯಾದುದಾರರ ಪರ ವಕೀಲರು | ಎ.ಪಿ.ಪಿ. |
| **9.** ಆರೋಪಿ ಪರ ವಕೀಲರು | ಶ್ರೀ. **ಟಿ.ಎಸ್.ಎಸ್.** , ವಕೀಲರು |

**ತೀರ್ಪು**

ಈ ಪ್ರಕರಣವನ್ನು ಆಲೂರು ಪೊಲೀಸ್ ಠಾಣೆಯ ಪೊಲೀಸರು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಸಹವಾಚಕ 187 ಐ.ಎಂ.ವಿ ಆಕ್ಟ್ ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತು ದಾಖಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕಾರ, ದಿನಾಂಕಃ 17.08.2020 ರಂದು ಮಧ್ಯಾಹ್ನ ಸುಮಾರು 03.00 ಗಂಟೆಯಲ್ಲಿ ಆಲೂರು ಪೊಲಿಸ್ ಠಾಣಾ ಸರಹದ್ದಿನ ಆಲೂರು-ಕದಾಳು ರಸ್ತೆಯಲ್ಲಿ ಎನ್.ಹೆಚ್-75, ಬಿ.ಎಂ.ರಸ್ತೆಯಿಂದ 500 ಮೀಟರ್ ಹಿಂದಕ್ಕೆ ಹೆಮ್ಮಿಗೆ ಮೋಹನ್ ರವರ ತೋಟದ ಹತ್ತಿರ ವಾಸುದೇವ. ಹೆಚ್.ಎಂ ರವರು ಕೆಎ-13-ಎಕ್ಸ್ - 5382 ನಂಬರಿನ ಬೈಕಿನಲ್ಲಿ ಹೋಗುತ್ತಿರುವಾಗ ಆರೋಪಿಯು ಹಿಂಬದಿಯಿಂದ ಬಂದ ಕೆಎ-13-ಕೆ-6066 ಸಂಖ್ಯೆಯ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ವಾಸುದೇವ.ಹೆಚ್.ಎಂ ರವರ ಬೈಕಿಗೆ ಹಿಂಬದಿಯಿಂದ ಡಿಕ್ಕಿಪಡಿಸಿ ಬೈಕನ್ನು ನಿಲ್ಲಿಸದೇ ಹೋಗಿದ್ದು, ಇದರಿಂದ ಹೆಚ್.ಎಂ.ವಾಸುದೇವರವರಿಗೆ ತಲೆಯ ಹಿಂಭಾಗ, ಬಲಗೈ, ಬಲಕಾಲು, ಎಡಮೊಣಕ್ಕೆ, ಎಡಕಿಬ್ಬೊಟ್ಟೆಗೆ ಪೆಟ್ಟಾಗಿ ಹಾಸನ ಮಂಗಳಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ದಿಃ19.08.2020 ರಂದು ಮಧ್ಯಾಹ್ನ

ಸುಮಾರು 12.30 ಗಂಟೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆಂದು ಆರೋಪಿ ವಿರುದ್ದ ಮೇಲ್ಕಂಡ ಕಲಂಗಳ ರೀತ್ಯಾ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ಆರೋಪಿ ಜಾಮೀನಿನ ಮೇಲಿರುತ್ತಾರೆ. ಆದೇಶಿಕೆ ಜಾರಿಯಾದ ನಂತರ ನ್ಯಾಯಾಲಯದ ಮುಂದೆ ಹಾಜರಾದ ಆರೋಪಿಗೆ ಪ್ರಕರಣದ ದಾಖಲೆಗಳ ನಕಲುಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರ ಪ್ರಕಾರ ಒದಗಿಸಲಾಗಿದೆ. ಆರೋಪಿ ತಮ್ಮ ವಿರುದ್ದದ ದೋಷಾರೋಪಣೆಯನ್ನು ಅಲ್ಲಗಳೆದಿರುವ ಕಾರಣ ಅದನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಒಟ್ಟು 8 ಜನ ಸಾಕ್ಷಿದಾರರನ್ನಾಗಿ ಪಟ್ಟಿ ಮಾಡಿದ್ದು ಅದರಲ್ಲಿ ಚಾಸಾ- 1, 3, 9, 10, 11, 13, 17 ಮತ್ತು 18 ರವರನ್ನು ವಿಚಾರಣೆ ಮಾಡಿಕೊಂಡಿರುತ್ತದೆ.

**4.** ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ ಮುಗಿದ ಬಳಿಕ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313(1)(ಬಿ) ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೂಳ್ಳಲಾಗಿದೆ. ಆರೋಪಿಯು ತಮ್ಮ ಪರವಾಗಿ ಯಾವುದೇ ಪ್ರತಿರಕ್ಷಣಾ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಇರಿಸಿರುವುದಿಲ್ಲ.

**5.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

**6.** ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ

1. ದಿನಾಂಕಃ 17.08.2020 ರಂದು ಮಧ್ಯಾಹ್ನ ಸುಮಾರು 3.00 ಗಂಟೆಯಲ್ಲಿ ಆಲೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಆಲೂರು-ಕದಾಳು ರಸ್ತೆಯಲ್ಲಿ ಎನ್.ಹೆಚ್-5, ಬಿ.ಎಂ.ರಸ್ತೆಯಿಂದ 500 ಮೀಟರ್ ಹಿಂದಕ್ಕೆ ಹೊಮ್ಮಿಗೆ ಮೋಹನ್ ರವರ ತೋಟದ ಹತ್ತಿರ ವಾಸುದೇವ.ಹೆಚ್.ಎಂ ರವರು ಕೆಎ.13-ಕೆ-6066 ನಂಬರಿನ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ವಾಸುದೇವ ರವರ ಬೈಕ್ ಗೆ ಹಿಂಬದಿಯಿಂದ ಡಿಕ್ಕಿಪಡಿಸಿ ಅಪಘಾತವನ್ನು ಮಾಡಿರುತ್ತಾರೆ. ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

2. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ ಸದರಿ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ವಾಸುದೇವ ರವರ ತಲೆಯ ಹಿಂಭಾಗ, ಬಲಗೈ ಬಲಕಾಲು, ಎಡಮೊಣಕ್ಕೆ, ಎಡಕಿಬ್ಬೊಟ್ಟೆಗೆ ಪೆಟ್ಟಾಗಿ ಮಂಗಳಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ದಿಃ19.08.2020 ರಂದು ಬೆಳಿಗ್ಗೆ 12.30 ಗಂಟೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ. ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

3. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ ಅಪಘಾತಪಡಿಸಿ ನಿರ್ಲಕ್ಷತನದಿಂದ ಗಾಡಿಯನ್ನು ನಿಲ್ಲಿಸದೇ ಹೊರಟುಹೋಗಿರುತ್ತಾರೆ. ಆದ್ದರಿಂದ ಆರೋಪಿಯು ಮೋಟಾರು ವಾಹನ ಕಾಯಿದೆ ಕಲಂ 187 ರನ್ವಯ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

4. ಏನು ಆದೇಶ?

**7.** ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನನ್ನ ಉತ್ತರಗಳು ಈ ಕೆಳಗಿನಂತಿವೆ:

**ಅಂಶ 1 ರಿಂದ 3: ನಕಾರಾತ್ಮಕವಾಗಿ**
**ಅಂಶ 4: ಅಂತಿಮ ಆದೇಶದಂತೆ**

## <u>ಕಾರಣಗಳು</u>

**8. <u>ಅಂಶ-1 ರಿಂದ 3</u>:** ದಿನಾಂಕಃ 17.08.2020 ರಂದು ಮಧ್ಯಾಹ್ನ ಸುಮಾರು 03.00 ಗಂಟೆಯಲ್ಲಿ ಆಲೂರು ಪೊಲಿಸ್ ಠಾಣಾ ಸರಹದ್ದಿನ ಆಲೂರು-ಕದಾಳು ರಸ್ತೆಯಲ್ಲಿ ಎನ್.ಹೆಚ್-75, ಬಿ.ಎಂ.ರಸ್ತೆಯಿಂದ 500 ಮೀಟರ್ ಹಿಂದಕ್ಕೆ ಹೆಮ್ಮಿಗೆ ಮೋಹನ್ ರವರ ತೋಟದ ಹತ್ತಿರ ವಾಸುದೇವ. ಹೆಚ್.ಎಂ ರವರು ಕೆಎ-13-ಎಕ್ಸ್ - 5382 ನಂಬರಿನ ಬೈಕಿನಲ್ಲಿ ಹೋಗುತ್ತಿರುವಾಗ ಆರೋಪಿಯು ಹಿಂಬದಿಯಿಂದ ಬಂದ ಕೆಎ-13-ಕೆ-6066 ಸಂಖ್ಯೆಯ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ವಾಸುದೇವ.ಹೆಚ್.ಎಂ ರವರ ಬೈಕಿಗೆ ಹಿಂಬದಿಯಿಂದ ಡಿಕ್ಕಿಪಡಿಸಿ ಬೈಕನ್ನು ನಿಲ್ಲಿಸದೇ ಹೋಗಿದ್ದು, ಇದರಿಂದ ಹೆಚ್.ಎಂ.ವಾಸುದೇವರವರಿಗೆ ತಲೆಯ ಹಿಂಭಾಗ, ಬಲಗೈ, ಬಲಕಾಲು, ಎಡಮೊಣಕ್ಕೆ, ಎಡಕಿಬ್ಬೊಟ್ಟೆಗೆ ಪೆಟ್ಟಾಗಿ ಹಾಸನ ಮಂಗಳಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ದಿಃ19.08.2020 ರಂದು ಮಧ್ಯಾಹ್ನ ಸುಮಾರು 12.30 ಗಂಟೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ ಎಂಬ ಅಂಶವನ್ನು ರುಜುವಾತು ಪಡಿಸಲು ಅಭಿಯೋಜನೆ ಸಾಕ್ಷಿದಾರರಾದ ಪ್ರಾಸಾ-1 ರಿಂದ ಪ್ರಾಸಾ-8

ರವರನ್ನು ವಿಚಾರಣೆಗೆ ಒಳಪಡಿಸಿದ್ದು, ಒಟ್ಟು 18 ದಾಖಲೆಗಳನ್ನು ನಿಪಿ-1 ಮತ್ತು 18 ಎಂದು ಗುರುತಿಸಿಕೊಂಡಿರುತ್ತದೆ.

**9.** ಅಭಿಯೋಜನೆಯು ದೂರುದಾರರಾಗಿರುವ ಚಾಸಾ-1, ಮಹಜರ್ ಸಾಕ್ಷಿದಾರರಾದ ಚಾಸಾ- 3, 9, 10, 11 ರವರನ್ನು ಪ್ರಾಸಾ-1 ರಿಂದ 5 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ದೂರು ಮತ್ತು ಮಹಜರ್ ನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-1, 2 ಮತ್ತು 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ), 2(ಎ) ಮತ್ತು 5(ಎ), 2(ಬಿ) ಎಂದು, ಕೆಎ-13-ಎಕ್ಸ್-5382 ರ ವಾಹನದ ಫೋಟೋಗಳನ್ನು ನಿಪಿ-3 ಎಂದು, ಸಿಡಿ ಯನ್ನು ನಿಪಿ-3(ಎ) ಎಂದು, ಕೃತ್ಯಸ್ಥಳ ಮಹಜರಿನ ಫೋಟೋವನ್ನು ನಿಪಿ-4 ಎಂದು ಗುರುತಿಸಲಾಗಿರುತ್ತದೆ. ನೋಟಿಸು ಮತ್ತು ಉತ್ತರದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಮತ್ತು 7 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-6(ಎ) ಮತ್ತು 7(ಎ) ಎಂದು ಗುರುತಿಸಲಾಗಿರುತ್ತದೆ. ಪ್ರಾಸಾ-1 ರಿಂದ 5 ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಸದರಿಯವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಹಾಯಕ ಸರ್ಕಾರಿ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದರೂ ಯಾವುದೇ ಮಹತ್ವದ ಅಂಶ ಕಂಡು ಬಂದಿರುವುದಿಲ್ಲ. ಪ್ರತ್ಯಕ್ಷ ಸಾಕ್ಷಿದಾರರಾಗಿರುವ ಚಾಸಾ-2 ರರು ಮರಣ ಹೊಂದಿರುತ್ತಾರೆ.

**10.** ಅಭಿಯೋಜನೆಯು ಚಾಸಾ-17 ರವರನ್ನು ಪ್ರಾಸಾ-6 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ದಿಃ17.08.2020 ರಂದು ಮಧ್ಯಾಹ್ನ ಸುಮಾರು 3.00 ಗಂಟೆ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊ.ಸಂಖ್ಯೆ 163/20 ಕಲಂ 279, 304(ಎ) ರೀತ್ಯಾ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ

ಕಡತವನ್ನು ಪಿ.ಐ ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ನಿಪಿ-1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-1(ಬಿ) ಎಂದು, ಪ್ರ.ವ.ವರದಿಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಗಿರುತ್ತದೆ. ಆರೋಪಿ ಪರ ವಕೀಲರು ಮಾಡಿರುವ ಪಾಟೀಸವಾಲಿನಲ್ಲಿ ಸದರಿಯವರು ಅಪಘಾತವಾದ ಬಗ್ಗೆ ಆಸ್ಪತ್ರೆಯಿಂದ ಪೊಲೀಸ್ ಠಾಣೆಗೆ ಯಾವುದೇ ಮಾಹಿತಿ ಬಂದಿರಲಿಲ್ಲ, ದೂರನ್ನು ಪಿರ್ಯಾದುದಾರರೇ ಬರೆದು ತಂದಿದ್ದರು ಎಂದು ನುಡಿದಿರುತ್ತಾರೆ.

**11.** ಅಭಿಯೋಜನೆಯು ಚಾಸಾ-8 ರವರನ್ನು ಪ್ರಾಸಾ-7 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ದಿಃ19.08.2020 ರಂದು ಹಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಶವಪಂಚನಾಮೆಯನ್ನು ಚಾಸಾ-5 ರಿಂದ 7 ರವರ ಸಮಕ್ಷಮ ಮಧ್ಯಾಹ್ನ 12.00 ರಿಂದ 2.00 ಗಂಟೆಯವರೆಗೆ ಶವ ಪಂಚನಾಮೆ ಜರುಗಿಸಿದ್ದು, ಸದರಿ ಶವಪಂಚನಾಮೆಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು, ಫೋಟೋಗಳನ್ನು ನಿಪಿ-15 ಎಂದು ಗುರುತಿಸಲಾಗಿರುತ್ತದೆ. ಚಾಸಾ-7, 8 ಮತ್ತು 12 ರವರ ಹೇಳಿಕೆಯನ್ನು ಪಡೆದಿದ್ದು, ಅದೇ ದಿನ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಕದಾಳು ರಸ್ತೆಯಲ್ಲಿರುವ ಅಪಘಾತ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 3 ರಿಂದ 4 ಗಂಟೆ ವರೆಗೆ ಸ್ಥಳದಲ್ಲಿ ಕೆಎ-13-ಎಕ್ಸ್ - 5382 ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಾಗಿ, ಕಚ್ಚಾ ನಕಾಶೆಯನ್ನು ತಯಾರಿಸಿ ದಿಃ24.08.2020 ರಂದು ವಾಹನ ಅಪಘಾತಪಡಿಸಿದ ವಾಹನದ ಮಾಲೀಕ ಅನಂತ್ ರವರು ಅಪಘಾತ ಮಾಡಿದ ಹಿರೋ ಹೊಂಡಾ ಬೈಕ್ ಕೆಎ-13-ಕೆ-6066 ನ್ನು ಠಾಣೆಗೆ ಬಂದು

ಹಾಜರುಪಡಿಸಿದ್ದು, ಪಂಚರಾದ ಚಾಸಾ-10 ಮತ್ತು 11 ರವರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಬೆಳಿಗ್ಗೆ 9.30 ರಿಂದ 10.30 ರವರೆಗೆ ಮಾಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಕಚ್ಚಾ ನಕಾಶೆಯನ್ನು ನಿಪಿ-16 ಎಂದು, ನೋಟೀಸುಗಳನ್ನು ನಿಪಿ-6 ಮತ್ತು 7 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-6(ಬಿ) ಎಂದು, ನಿಪಿ-7 (ಬಿ) ಎಂದು ಗುರುತಿಸಲಾಗಿರುತ್ತದೆ.

**12.** ಮುಂದುವರೆದು ಪ್ರಾಸಾ-7 ರವರು ಎರಡು ವಾಹನಗಳನ್ನು ಕೂಡ ವಾಹನ ನಿರೀಕ್ಷಕರ ಪರಿವೀಕ್ಷಣೆಗೆ ಕಳುಹಿಸಿಕೊಡಲಾಯಿತು. ಅಪಘಾತ ಮಾಡಿದ ವಾಹನ ಕೆಎ-13-ಕೆ-6066 ವಾಹನವನ್ನು ಬಿಡುಗಡೆಗಾಗಿ ಆರ್ ಟಿ ಒ ಇಂದ ವರದಿ ಬಂದ ಮೇರೆಗೆ ಇಂಡನ್ನಿಟಿ ಬಾಂಡ್ ಹಾಗೂ ವಾಹನ ದಾಖಲಾತಿಗಳನ್ನು ಪಡೆದು ವಾಹನ ಮಾಲೀಕ ಅನಂತ್ ರವರಿಗೆ ಪೋಟೋ ತೆಗೆದು ಬಿಟ್ಟುಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಇಂಡೆನ್ಸಿಟಿ ಬಾಂಡ್ ನ ನಿಪಿ- 17 ಎಂದು, ಸಾಕ್ಷಿಯ ಸಹಿಯನ್ನು ನಿಪಿ 17(ಎ) ಎಂದು ಗುರುತಿಸಲಾಗಿರುತ್ತದೆ.

**13.** ಪ್ರಾಸಾ-7 ರವರು ಮುಂದುವರೆದು ದಿಃ 04.09.2020 ರಂದು ಅಪಘಾತವಾಗಿದ್ದ ಕೆಎ-13-ಎಕ್ಸ್-5382 ಆಕ್ಟಿವಾ ಹೊಂಡಾ ಪೋಟೋ ತೆಗೆದು ದಾಖಲಾತಿಗಳನ್ನು ಪಡೆದು ಚಾಸಾ-12 ರವರಿಂದ ಇಂಡೆಮ್ನಿಟಿ ಬಾಂಡ್ ಪಡೆದು ನೀಡಿ, ದಿಃ 15-09-2020 ರಂದು ಆರ್ ಟಿ ಒ ವರದಿ ಮತ್ತು ಪಿ ಎಂ ವರದಿಯನ್ನು ಸ್ವೀಕರಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಸದರಿ ನಿಪಿ-13 ಮತ್ತು 14 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-13(ಎ), ನಿಪಿ 14(ಎ) ಎಂದು ಗುರುತಿಸಲಾಗಿರುತ್ತದೆ.

**14.** ಪ್ರಾಸಾ-7 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ಸದರಿಯವರು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸ್ ನೀಡಿ ದಸ್ತಗಿರಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

**15.** ಅಭಿಯೋಜನೆಯು ಚಾಸಾ-13 ರವರನ್ನು ಪ್ರಾಸಾ-8 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ದಿಃ29.08.2020 ರಂದು ಈ ಪ್ರಕರಣದಲ್ಲಿ ವಾಹನಗಳ ತಪಾಸಣೆಗಳ ಮನವಿ ಬಂದಿದ್ದು, ಅದರಂತೆ ಬೆಳಿಗ್ಗೆ ಸುಮಾರು 9.00 ಕ್ಕೆ ಆಲೂರು ಪೊಲೀಸ್ ಠಾಣಾ ಆವರಣದಲ್ಲಿ ಇದ್ದ ಕೆಎ-13-ಎಕ್ಸ್-5382 ವಾಹನವನ್ನು ಪರಿಶೀಲಿಸಿದಾಗ ಅದರ ಮುಂಭಾಗದ ಹೆಡ್ ಲೈಟ್ ಇನ್ಸ್ಟ್ರುಮೆಂಟ್ ಪ್ಯಾನಲ್, ಮುಂಭಾಗದ ಬ್ಯಾಟರಿ ಕವರ್ ಮತ್ತು ಮಾಸ್ಕ್ ಜಕಮ್ ಆಗಿರುತ್ತದೆ. ಮುಂಭಾಗದ ಬಲಭಾಗದ ಸೈಡ್ ಮಿರರ್ ಒಡೆದು ಹೋಗಿರುತ್ತದೆ. ಹಿಂಭಾಗದಿ ಟೈಲ್ ಲೈಟ್ ಜಕಮ್ ಆಗಿರುತ್ತದೆ. ವಾಹನ ಸಂಖ್ಯೆ ಕೆಎ-13-ಕೆ-6066 ವಾಹನವನ್ನು ಪರಿಶೀಲಿಸಿದಾಗ ವಾಹನದ ಮುಂಭಾಗದ ಚಕ್ರದ ಗಾರ್ಡ್ ಹೊಡೆದು ಹೋಗಿರುತ್ತದೆ ಮತ್ತು ಮುಂಭಾಗದ ಹೆಡ್ ಲೈಟ್ ಮಾಸ್ಕ್ ಹೊಡೆದು ಹೋಗಿರುತ್ತದೆ. ಸದರಿ ವಾಹನಗಳನ್ನು ಚಲಾಯಿಸಿ ನೋಡಿದಾಗ ಅದರ ಬ್ರೆಕ್ ಸಿಸ್ಟಮ್ ಸುಸ್ಥಿತಿಯಲ್ಲಿರುತ್ತದೆ. ಯಾವುದೇ ತಾಂತ್ರಿಕ

ದೋಷದಿಂದ ಅಪಘಾತವಾಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ನಿಪಿ-13 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಗಿರುತ್ತದೆ.

**16.** ಪ್ರಾಸಾ-8 ರವರನ್ನು ಆರೋಪಿ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ಸದರಿಯವರು ಈ ಪ್ರಕರಣಕ್ಕೆ ಸಂಬಂಧಪಟ್ಟ ವಾಹನಗಳನ್ನು ಪರಿಶೀಲಿಸಿರುವುದಿಲ್ಲ, ಸುಳ್ಳು ವರದಿ ನೀಡಿರುವ ಅಂಶವನ್ನು ನಿರಾಕರಿಸಿರುತ್ತಾರೆ.

**17.** ಈ ಪ್ರಕರಣದಲ್ಲಿ ದೂರುದಾರರಾದ ಚಾಸಾ-1 ರವರು ಮತ್ತು ಮಹಜರ್ ಸಾಕ್ಷಿದಾರರಾಗಿರುವ ಪ್ರಾಸಾ-2 ರಿಂದ 5 ರವರು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅವರನ್ನು ಸಹಾಯಕ ಸರ್ಕಾರಿ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಯಾವುದೇ ಮಹತ್ವದ ಅಂಶ ಕಂಡು ಬಂದಿರುವುದಿಲ್ಲ. ಆದ ಕಾರಣ ಸದರಿಯವರ ಸಾಕ್ಷ್ಯಗಳು ಅಭಿಯೋಜನೆಗೆ ಸಹಕಾರಿಯಾಗಿರುವುದಿಲ್ಲ.

**18.** ಒಟ್ಟಾರೆಯಾಗಿ ಎಲ್ಲಾ ಸಾಕ್ಷ್ಯಗಳನ್ನು ಗಮನಿಸಿದರೆ ಆರೋಪಿಯ ವಿರುದ್ಧ ಆರೋಪ ಸಾಭೀತುಪಡಿಸುವ ಸಾಕ್ಷ್ಯ ಮೂಡಿಬಂದಿರುವುದಿಲ್ಲ. ಈ ಪ್ರಕರಣದಲ್ಲಿ ಅಪಘಾತವಾದ ಸಮಯದಲ್ಲಿ ಆರೋಪಿಯು ತನ್ನ ವಾಹನವನ್ನು ಹೇಗೆ ಚಾಲನೆ ಮಾಡುತ್ತಿದ್ದರು ಎಂಬುವುದು ಅಭಿಯೋಜನೆಯವರ ಸಾಕ್ಷ್ಯದಿಂದ ಮೂಡಿ ಬಂದಿರುವುದಿಲ್ಲ. ಈ ಪ್ರಕರಣದಲ್ಲಿ ಆರೋಪಿಯು ವಾಹನವನ್ನು ಅತಿವೇಗದಿಂದಾಗಲೀ ಅಥವಾ ಅಜಾಗರೂಕತೆಯಿಂದಾಗಲೀ ಚಾಲನೆ ಮಾಡಿರುತ್ತಾರೆ ಎಂಬುವುದಕ್ಕೆ ಅಭಿಯೋಜನೆಯ ಸಾಕ್ಷ್ಯದ ಕೊರತೆ ಇರುತ್ತದೆ.

**19.** ಪ್ರಾಸಾ-6 ರಿಂದ 8 ರವರು ಆರಕ್ಷಕರಾಗಿದ್ದು, ಸದರಿಯವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯಲೇ ಬೇಕಿರುತ್ತದೆ. ಆದರೆ ಸದರಿಯವರ ಸಾಕ್ಷ್ಯಧಾರದ ಮೇಲೆ ಆರೋಪಿಯು ಆಪಾದಿಸಲಾದಂತೆ ಅರೋಪ ಎಸಗಿದ್ದಾರೆ ಎಂದು ಯಾವುದೇ ಸ್ವಾಭಾವಿಕ ಸಾಕ್ಷಿದಾರರಿಂದ ನಿರ್ಧಾರ ಮಾಡುವುದು ಸಮಂಜಸವಾಗಿರುವುದಿಲ್ಲ, ಯಾವುದೇ ಒಬ್ಬ ವ್ಯಕ್ತಿಯ ಅಪರಾಧವನ್ನು ರುಜುವಾತು ಪಡಿಸುವ ಹಂತದಲ್ಲಿ ಅಭಿಯೋಜನೆಯು ಆರಕ್ಷಕ ಸಾಕ್ಷ್ಯದ ಜೊತೆಗೆ ಅಗತ್ಯ ದಾಖಲಾತಿಗಳು ಮತ್ತು ಸ್ವತಂತ್ರ ಸಾಕ್ಷಿದರರನ್ನು ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸಿ ಅವರಿಂದ ಪೂರಕ ಸಾಕ್ಷ್ಯಗಳನ್ನು ಹಾಜರುಪಡಿಸಿ ರುಜುವಾತುಪಡಿಸಬೇಕಿರುತ್ತದೆ. ಆದಕಾರಣ ಆರೋಪಿಯ ವಿರುದ್ಧ ಆಪಾದಿಸಲಾದ ಕೃತ್ಯವನ್ನು ಎಸಗಿದ್ದಾರೆ ಎನ್ನುವ ಬಗ್ಗೆ ಯಾವುದೇ ಕನಿಷ್ಠಮಟ್ಟದ ಸಾಕ್ಷ್ಯಾಧಾರಗಳೂ ಕೂಡಾ ನ್ಯಾಯಾಲಯದ ಮುಂದೆ ಲಭ್ಯವಿರುವುದಿಲ್ಲ. ಆರೋಪಿಯ ವಿರುದ್ಧ ಹೊರಿಸಲಾದ ದೋಷಾರೋಪಣೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆ ವಿಫಲವಾಗಿದೆ ಎನ್ನುವುದಾಗಿ ತೀರ್ಮಾನಿಸಿ ಈ ಮೇಲಿನ ಅಂಶಗಳನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

**20.** **<u>ಅಂಶ-4:</u>** ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

## <u>ಆದೇಶ</u>

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ವತಿರ್ಸುತ್ತಾ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಮತ್ತು 187**

**ಮೋಟಾರು ವಾಹನ ಕಾಯಿದೆ ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತಿನ ಆರೋಪಗಳಿಗಾಗಿ ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆಗೊಳಿಸಲಾಗಿದೆ.**

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ಅಡಿಯಲ್ಲಿ ಆರೋಪಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಮುಂದಿನ 6 ತಿಂಗಳುಗಳವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು, ನಂತರ ಆರೋಪಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.**

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ **04ನೇ ಜೂನ್ 2026** ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

**(ಶ್ರೀಮತಿ ಸ್ನೇಹಾ ಎಂ.)**
**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಆಲೂರು.**

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

| | | |
|---|---|---|
| ಪ್ರಾಸಾ-1 | : | ಗಂಗಾಧರ್.ಹೆಚ್.ಎಂ |
| ಪ್ರಾಸಾ-2 | : | ಗಣೇಶ್ |
| ಪ್ರಾಸಾ-3 | : | ಅನಂತ |
| ಪ್ರಾಸಾ-4 | : | ಜಿ.ಎಲ್.ವಿನಾಯಕ |
| ಪ್ರಾಸಾ-5 | : | ಪಿ.ಪ್ರದೀಪ್ |
| ಪ್ರಾಸಾ-6 | : | ಎಂ.ಕೆ.ಶಂಕರಯ್ಯ |
| ಪ್ರಾಸಾ-7 | : | ರೇವಣ್ಣ |
| ಪ್ರಾಸಾ-8 | : | ಪದ್ಮನಾಭ ಡಿ |

**ಅಭಿಯೋಜನೆ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ ಮತ್ತು ಬಿ ) | : | ಸಹಿಗಳು |
| ನಿಪಿ-2 | : | ಮಹಜರ್ |

| | | |
|---|---|---|
| ನಿಪಿ-2(ಎ ರಿಂದ ಸಿ) | : | ಸಹಿಗಳು |
| ನಿಪಿ-3 | : | ಫೋಟೋ |
| ನಿಪಿ-3(ಎ) | : | ಸಿಡಿ |
| ನಿಪಿ-4 | : | ಫೋಟೋ |
| ನಿಪಿ-5 | : | ಅಮಾನತ್ತು ಮಹಜರ್ |
| ನಿಪಿ-5(ಎ ರಿಂದ ಡಿ) | : | ಸಹಿಗಳು |
| ನಿಪಿ-6 | : | ನೋಟಿಸು |
| ನಿಪಿ-6(ಎ ಮತ್ತು ಬಿ) | : | ಸಹಿಗಳು |
| ನಿಪಿ-7 | : | ಉತ್ತರ |
| ನಿಪಿ-7(ಎ ಮತ್ತು ಬಿ) | : | ಸಹಿಗಳು |
| ನಿಪಿ-8 ರಿಂದ 10 | : | ಫೋಟೋಗಳು |
| ನಿಪಿ-11 | : | ಪ್ರ.ವ.ವರದಿ |
| ನಿಪಿ-11(ಎ) | : | ಸಹಿ |
| ನಿಪಿ-12 | : | ಶವಪಂಚನಾಮೆ |
| ನಿಪಿ-12(ಎ) | : | ಸಹಿ |
| ನಿಪಿ-13 | : | ಐ.ಎಂ.ವಿ ವರದಿ |
| ನಿಪಿ-13(ಎ) | : | ಸಹಿ |
| ನಿಪಿ-14 | : | ಪಿ.ಎಂ.ವರದಿ |
| ನಿಪಿ-14(ಎ) | : | ಸಹಿ |
| ನಿಪಿ-15 | : | ಫೋಟೋಗಳು |
| ನಿಪಿ-16 | : | ಕಚ್ಚಾ ನಕಾಶೆ |
| ನಿಪಿ-16(ಎ) | : | ಸಹಿ |
| ನಿಪಿ-17 ಮತ್ತು 18 | : | ಇಂಡಿಮಿನಿಟಿ ಬಾಂಡ್ ಗಳು |
| ನಿಪಿ-17(ಎ) ಮತ್ತು 18(ಎ) | : | ಸಹಿಗಳು |

**ಅಭಿಯೋಜನೆ ಪರ ಗುರುತಿಸಲಾದೆ ಮುದ್ದೆಮಾಲುಗಳ ಪಟ್ಟಿಃ**

-ಇಲ್ಲ-

**ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

-ಇಲ್ಲ-

**ಆರೋಪಿ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿಃ**

-ಇಲ್ಲ-

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಆಲೂರು.**